**ಸಾಕ್ಷಿಯನ್ನು ದಿನಾಂಕಃ 05-12-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ**

1. ದಾವಾ ಸ್ವತ್ತು ಮೂಲತಃ ಧರ್ಮಪ್ಪ ತಂದೆ ದೇವಿಂದ್ರಪ್ಪನಿಗೆ ಸೇರಿದ್ದು ಅಂದರೆ ಸರಿ. ಸದರಿ ದರ್ಮಪ್ಪ ಇವರು ದಿನಾಂಕ 12.06.1967 ರಂದು ರೂ 2,000/- ಕ್ಕೆ ದಾವಾ ಅಸ್ತಿಯನ್ನು ಸಣ್ಣಪ್ಪ ತಂದೆ ದುಗ್ಗಾವತಿ ಹನುಮಪ್ಪ ಇವರಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ಖರೀದಿ ಮಾಡಿದ್ದರು ಅಂದರೆ ಸರಿ. ಧರ್ಮಪ್ಪನಿಗೆ 4 ಜನ ಮಕ್ಕಳು ಇರುವರು. ದರ್ಮಪ್ಪನಿಗೆ 10 ಜನ ಮಕ್ಕಳು ಅಂದರೆ ಸರಿಯಲ್ಲ. ಧರ್ಮಪ್ಪನಿಗೆ ಅಜಿತಾ, ಜ್ಯೋತಿರ್ಮಲ, ತಾವನಪ್ಪ, ಚಂಪವತಿ, ವರ್ದಮನ, ಕಲಾವತಿ, ಲಕ್ಷ್ಮೀ, ಚಂದ್ರಪ್ರಭು, ಮನ್ಮಥ ಮತ್ತು ಪದ್ಮವಾತಿ ಎಂಬ ಮಕ್ಕಳು ಇರುವರು ಅಂದರೆ ಸರಿಯಲ್ಲ ನನಗೆ ತಿಳಿದ ಮಟ್ಟಗೆ 4 ಜನ ಮಾತ್ರ ಮಕ್ಕಳು ನನಗೆ ಅವರ ಹೆಸರು ಗೊತ್ತಿಲ್ಲ. ಆ ಪೈಕಿ ಜ್ಯೋತೀರ್ಮಲ ಮತ್ತು ವರ್ದಮನ್ ಮೃತ ಪಟ್ಟಿರುವರು ಅಂದರೆ ನನಗೆ ಗೊತ್ತಿಲ್ಲ.

2. ವಾದಿಯರು ಮತ್ತು 1 ರಿಂದ 7 ನೇ ಪ್ರತಿವಾದಿಗಳು ಬೇರೆ ಬೇರೆ ಗ್ರಾಮಗಳಲ್ಲಿ ವಾಸ ಇರುವರು ಅಂದರೆ ಸರಿ. ವಾದಿಯರು ಮತ್ತು 1 ರಿಂದ 7 ನೇ ಪ್ರತಿವಾದಿಯರು ದೇವಸ್ಥಾನದ ಕೆಲಸವನ್ನು ಮಾಡಲು ಮತ್ತು ಅಡುಗೆ ಕೆಲಸವನ್ನು ಮಾಡಲು ಬೇರೆ ಕಡೆಗೆ ಹೋಗಿರುವರು ಅಂದರೆ ಸರಿ. ಶಾರದಮ್ಮ ಇವರು ದರ್ಮಪ್ಪನ ಪತ್ನಿ ಅಂದರೆ ಸರಿ. ನಾನು ಖರೀದಿ ಮಾಡುವ ಕಾಲಕ್ಕೆ ವಾರಸುದಾರರ ಬಗ್ಗೆ ವಿಚಾರಿಸಿದ್ದೇನೆ. ಖರೀದಿ ಮಾಡುವ ಮೊದಲು ನಾನು ವಾದಿಯರನ್ನು ಕೇಳಿರುವುದಿಲ್ಲ. ದಾವಾ ಅಸ್ತಿ ವಾದಿಯರು ಮತ್ತು 1 ರಿಂದ 7 ನೇ ಪ್ರತಿವಾದಿಗಳ ಜಂಟಿ ಸ್ವಾಧೀನದಲ್ಲಿರುವುದು ಅಂದರೆ ಸರಿಯಲ್ಲ. ದಾವಾ ಅಸ್ತಿಯನ್ನು ಕಬಳಿಸಲು ನಾನು 1 ನೇ ಪ್ರತಿವಾದಿಯೊಂದಿಗೆ ಮಿಲಾಪಿಯಾಗಿ ದಿನಾಂಕ 21.03.2011

ರಂದು ಖರೀದಿ ಪತ್ರವನ್ನು ಸೃಷ್ಟಿಸಿದ್ದೇವೆ ಅಂದರೆ ಸರಿಯಲ್ಲ. ವಾದಿಯರಿಗೆ ಆ ವಿಚಾರ ದಿನಾಂಕ 15.07.2013 ರಂದು ಗೊತ್ತಾಗಿರುತ್ತದೆ ಮತ್ತು ಅವರು ಖಾತೆ ಬದಲಾವಣೆ ಮಾಡದಂತೆ ತಹಶಿಲ್ದಾರ ರವರಿಗೆ ತಕರಾರು ಕೊಟ್ಟಿರುವರು ಅಂದರೆ ಸರಿ. ದಾವಾ ಅಸ್ತಿಯ ಖಾತೆವು ತಕರಾರು ಕೊಟ್ಟಾಗಿಯೂ ಕೂಡ ನನ್ನ ಹೆಸರಿಗೆ ಬದಲಾವಣೆ ಆಗಿರುತ್ತದೆ ಅಂದರೆ ಸರಿ.

3. 1 ನೇ ಪ್ರತಿವಾದಿ ಒಬ್ಬನೇ ಶಾರದಮ್ಮನ ಮಗ ಎಂದು ಹೇಳಿದ ಕಾರಣ ದಾವಾ ಅಸ್ತಿಯನ್ನು ಖರೀದಿ ಮಾಡಿದ್ದೇನ ಎಂದು ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ಕ್ರಯಕ್ಕೆ ತೆಗೆದುಕೊಂಡಾಗಿನಿಂದ ದಾವಾ ಅಸ್ತಿ ನನ್ನ ಸ್ವಾಧೀನ ಅನುಭವದಲ್ಲಿ ಇರುವುದು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಸದ್ಭಾವನ ಖರೀದಿ ದಾರ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಕ್ರಯ ಪತ್ರದ ಅಧಾರದ ಮೇಲೆ ನಾನಗೆ ಮಾಲ್ಕಿ ಹಕ್ಕು ವರ್ಗಾವಣೆ ಆಗಿರುವುದಿಲ್ಲ ಅಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**05-12-2025**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** **05.12.2025**